## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\586\2020\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 06/04/2022

**ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಶ್ರೀ.ಹೆಚ್.ಕೆ.ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ, ಸಾಗರ, ಶಿವಮೊಗ್ಗ ಜಿಲ್ಲೆ ಇವರ ದುರ್ನಡತೆಯ ಬಗ್ಗೆ.

**********

ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕ್, ಬಿ.ಹೆಚ್.ರಸ್ತೆ, ಯಳವರಸಿ ಗ್ರಾಮದ ನಿವಾಸಿಯಾದ ಶ್ರೀ.ಜಾನ್ಸನ್ ರೋಡ್ರಿಗಸ್ (ಇನ್ನು ಮುಂದೆ, 'ಫಿರ್ಯಾದಿದಾರರು' ಎಂದು ಕರೆಯಲ್ಪಡುತ್ತಾರೆ) ಇವರು 1)ಶ್ರೀ.ಹೆಚ್.ಕೆ.ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು; ಮತ್ತು 2) ಶ್ರೀ.ರಾಜಪ್ಪ, ಪೌರಾಯುಕ್ತರು (ಪ್ರಸ್ತುತ ನಿವೃತ್ತ), ನಗರಸಭೆ, ಸಾಗರ, ಶಿವಮೊಗ್ಗ ಜಿಲ್ಲೆ (ಇನ್ನು ಮುಂದೆ, ಕ್ರಮವಾಗಿ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಸಾಗರ ತಾಲ್ಲೂಕಿನ ಯಳವರಸಿ ಗ್ರಾಮದ ಸರ್ವೆ ನಂ.31ರಲ್ಲಿ 03 ಎಕರೆ ಜಮೀನು ಫಿರ್ಯಾದಿದಾರರ ಮತ್ತು ಅವರ ಸಹೋದರನಾದ ಶ್ರೀ.ಜೀವನ್ ಇವರ ಜಂಟಿ ಹೆಸರಿನಲ್ಲಿ ಖಾತೆ ಇದೆ. ಸದರಿ ಜಮೀನಿನ ಪೈಕಿ 01 ಎಕರೆ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಫಿರ್ಯಾದಿದಾರರು ಸಾಗರ ನಗರಸಭೆಗೆ ದಿ:16/01/2018 ರಂದು ಅರ್ಜಿಯನ್ನು ಸಲ್ಲಿಸಿದ್ದು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯವರ ತಾಂತ್ರಿಕ ಅಭಿಪ್ರಾಯ ಕೋರಿ ನಗರಸಭೆಯವರು ದಿ:15/03/2018ರಂದು ಪತ್ರವನ್ನು ಬರೆದಿದ್ದಾರೆ. ಸದರಿ ಜಮೀನು ವಸತಿ ವಲಯದಲ್ಲಿ ಇರುವುದರಿಂದ, ವಾಣಿಜ್ಯ ಉದ್ದೇಶಕ್ಕಾಗಿ ತಾಂತ್ರಿಕ ಅಭಿಪ್ರಾಯವನ್ನು ನೀಡಲು ಅವಕಾಶ ಇರುವುದಿಲ್ಲವೆಂದು ಸದರಿಯವರು ದಿ:20/04/2018ರಂದು ಪತ್ರ ಬರೆದಿದ್ದಾರೆ. ತದನಂತರ, ದಿ:23/01/2019ರಂದು ದೂರುದಾರರು ಪುನಃ ಇನ್ನೊಂದು ಅರ್ಜಿಯನ್ನು ಸಲ್ಲಿಸಿ, ಸದರಿ ಜಮೀನಿನ ಪೈಕಿ 10 ಗುಂಟೆ ಜಾಗವನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ತಾಂತ್ರಿಕ ಅಭಿಪ್ರಾಯದ ಕುರಿತು ನಿರಾಪೇಕ್ಷಣಾ ಪ್ರಮಾಣ ಪತ್ರ ಕೋರಿ, ಅರ್ಜಿಯನ್ನು ಸಲ್ಲಿಸಿದ್ದು, ಈವರೆಗೂ

ನಿರಾಪೇಕ್ಷಣಾ ಪ್ರಮಾಣ ಪತ್ರವನ್ನಾಗಲೀ ಅಥವಾ ತಿಳುವಳಿಕೆ ಪತ್ರವನ್ನಾಗಲೀ ನೀಡಿಲ್ಲ. ಈ ಬಗ್ಗೆ ಮಾಹಿತಿ ಕೋರಿ ಸಲ್ಲಿಸಿದ ಅರ್ಜಿಗೆ ಮಾಹಿತಿ ನೀಡಲು ರಹ ಇರುವುದಿಲ್ಲ ಎಂದು ಹಿಂಬರಹ ನೀಡಿದ್ದಾರೆ. ನಗರಸಭೆಯವರು ಈಗಾಗಲೇ ಯಳವರಸಿ ಗ್ರಾಮದ ಬೇರೆ-ಬೇರೆ ಸರ್ವೆ ನಂಬರುಗಳಲ್ಲಿನ ಜಮೀನುಗಳ ಭೂ ಪರಿವರ್ತನೆಗೆ ನಿರಾಪೇಕ್ಷಣಾ ಪ್ರಮಾಣ ಪತ್ರವನ್ನು ನೀಡುತ್ತಿದ್ದು, ಪ್ರಭಾವಿ ವ್ಯಕ್ತಿಗಳು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಪ್ರಭಾವ ಬೀರುತ್ತಿರುವುದರಿಂದ, ತಮ್ಮ ಅರ್ಜಿಯನ್ನು ಉದ್ದೇಶಪೂರ್ವಕವಾಗಿ ಅವಗಣನೆ ಮಾಡಿ, ತೊಂದರೆಯನ್ನುಂಟು ಮಾಡಿದ್ದಾರೆ. ಕಾರಣ, ಸೂಕ್ತ ಕ್ರಮ ವಹಿಸಲು ದೂರುದಾರರು ಕೋರಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿ, ಎದುರುದಾರ ನಂ.1 ರವರು ದಿನಾಂಕ:28/09/2020 ಮತ್ತು ಎದುರುದಾರ ನಂ.2 ರವರು ದಿನಾಂಕ:14/09/2020ರ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ.

4. ಎದುರುದಾರ ನಂ.1 ರವರ ಆಕ್ಷೇಪಣೆಯ ವಿವರವು ಈ ಕೆಳಗಿನಂತೆ ಇರುತ್ತದೆ -

ಫಿರ್ಯಾದಿದಾರರು ದಿನಾಂಕ:23/01/2019ರಂದು ತಮ್ಮ 03 ಎಕರೆ ಜಮೀನಿನ ಪೈಕಿ 10 ಗುಂಟೆ ಜಾಗೆಯನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ತಾಂತ್ರಿಕ ಅಭಿಪ್ರಾಯ ಕುರಿತು ಎನ್‌ಓಸಿ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಎದುರುದಾರ ನಂ.1 ರವರಿಗೆ ಚುನಾವಣಾ ಕಾರ್ಯ, ಕೋವಿಡ್-19ರ ಕರ್ತವ್ಯ ಮತ್ತು ದಿನಾಂಕ:01/04/2020 ರಿಂದ ಪ್ರಭಾರ ಪೌರಾಯುಕ್ತರ ಹೆಚ್ಚುವರಿ ಕಾರ್ಯವನ್ನು ಸಹ ನಿರ್ವಹಿಸುತ್ತಿರುವುದರಿಂದ ಕಛೇರಿಯ ಕೆಲಸದ ಒತ್ತಡದಿಂದಾಗಿ ಫಿರ್ಯಾದಿದಾರರ ಅರ್ಜಿಯ ಮೇರೆಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಪತ್ರ ರವಾನಿಸಲು ಕಾಲ ವಿಳಂಬವಾಗಿರುತ್ತದೆಯೇ ಹೊರತು ದುರುದ್ದೇಶದಿಂದ ಕೂಡಿದ್ದಾಗಿರುವುದಿಲ್ಲ. ದಿನಾಂಕ:14/09/2020ರಂದು ಫಿರ್ಯಾದಿದಾರರ ಅರ್ಜಿಗೆ ಸಂಬಂಧಿಸಿದಂತೆ ತಾಂತ್ರಿಕ ಅಭಿಪ್ರಾಯಕ್ಕಾಗಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕರಿಗೆ ನಿಯಮಾನುಸಾರ ಪರಿಶೀಲಿಸಿ ತಾಂತ್ರಿಕ ಅಭಿಪ್ರಾಯ ನೀಡಲು ಪತ್ರ ರವಾನಿಸಲಾಗಿದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ತಾಂತ್ರಿಕ ಅಭಿಪ್ರಾಯ ನೀಡಿದ ನಂತರ ನಿಯಮಾನುಸಾರ ಸೂಕ್ತ ಕ್ರಮ ವಹಿಸಲಾಗುವುದೆಂದು ಹೇಳಿದ್ದಾರೆ.

5. ಎದುರುದಾರ ನಂ.2 ರವರ ಆಕ್ಷೇಪಣೆಯ ವಿವರವು ಈ ಕೆಳಗಿನಂತೆ ಇರುತ್ತದೆ -

ಎದುರುದಾರ ನಂ.2 ರವರು ದಿನಾಂಕ:31/03/2020ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿದ್ದಾರೆ. ಚುನಾವಣಾ ನೀತಿ ಸಂಹಿತೆ ಕಾರಣಕ್ಕಾಗಿ ಎದುರುದಾರ ನಂ.2 ರವರು ದಿನಾಂಕ:26/03/2019 ರಿಂದ 16/06/2019ರವರೆಗೆ ಮುಳಬಾಗಿಲು ನಗರಸಭೆಯ

ಪೌರಾಯುಕ್ತರಾಗಿ ಕಾರ್ಯನಿರ್ವಹಿಸಿದ್ದಾರೆ. ಪುನಃ ಎದುರುದಾರ ನಂ.2 ರವರು ದಿನಾಂಕ:17/06/2019 ರಿಂದ ದಿನಾಂಕ:31/03/2020 ರವರೆಗೆ ಸಾಗರ ನಗರಸಭೆಗೆ ವರ್ಗಾವಣೆಗೊಂಡು ಅಲ್ಲಿ ಕಾರ್ಯನಿರ್ವಹಿಸಿದ್ದಾರೆ. ಫಿರ್ಯಾದಿದಾರರು ದಿನಾಂಕ:23/01/2019ರಂದು ಸಲ್ಲಿಸಿದ ಅರ್ಜಿಯು ಎದುರುದಾರ ನಂ.2 ರವರ ಗಮನಕ್ಕೆ ಬಂದಿಲ್ಲ. ಭೂ ಪರಿವರ್ತನೆಗೆ ಎನ್‌ಒಸಿ ಕೋರಿ ಬರುವ ಅರ್ಜಿಗಳ ಸಂಬಂಧವಾಗಿ ಸ್ಥಳ ಪರಿಶೀಲಿಸಿ ವರದಿ ಸಲ್ಲಿಸುವ ಕರ್ತವ್ಯವು ಎದುರುದಾರ ನಂ.1 ರವರಾದ ಶ್ರೀ.ಹೆಚ್.ಕೆ.ನಾಗಪ್ಪ ಇವರಿಗೆ ಸಂಬಂಧಿಸಿದೆ. ಆದ್ದರಿಂದ, ಎದುರುದಾರ ನಂ.2 ರವರ ವಿರುದ್ಧದ ಪ್ರಕರಣವನ್ನು ಕೈಬಿಡಬೇಕಾಗಿ ವಿನಂತಿ.

6. ಎದುರುದಾರರ ಆಕ್ಷೇಪಣೆಗಳಿಗೆ ಫಿರ್ಯಾದಿದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದ್ದು, ಫಿರ್ಯಾದಿದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಫಿರ್ಯಾದಿದಾರರು ಯಳವರಸಿ ಗ್ರಾಮದ ತಮ್ಮ ಸರ್ವೆ ನಂ.31ರ 03 ಎಕರೆ ಜಮೀನಿನ ಪೈಕಿ 10 ಗುಂಟೆ ಜಮೀನಿಗೆ ಸಂಬಂಧವಾಗಿ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಗಾಗಿ ನಿರಾಪೇಕ್ಷಣಾ ಪ್ರಮಾಣ ಪತ್ರ ಕೋರಿ ನಗರಸಭೆಗೆ ದಿ:23/01/2019ರ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ಕಂಡು ಬಂದಿದೆ. ಅದೇ ರೀತಿ, ಫಿರ್ಯಾದಿದಾರರ ಅರ್ಜಿಗೆ ಸಂಬಂಧಿಸಿದಂತೆ, ತಾಂತ್ರಿಕ ಅಭಿಪ್ರಾಯ ಕೋರಿ ಎದುರುದಾರ ನಂ.1ರವರು ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕರಿಗೆ ದಿನಾಂಕ:14/09/2020ರ ಪತ್ರವನ್ನು ರವಾನಿಸಿರುವುದು ಕಂಡು ಬಂದಿದೆ. ಫಿರ್ಯಾದಿದಾರರು ದಿನಾಂಕ:23/01/2019ರ ಅರ್ಜಿ ಸಲ್ಲಿಸಿದ ನಂತರ ಒಂದು ವರ್ಷ ಏಳು ತಿಂಗಳು 22 ದಿನಗಳ ಬಳಿಕ ಹಾಗೂ ಈ ದೂರು ದಾಖಲಾದ ಸುಮಾರು 06 ತಿಂಗಳುಗಳ ಬಳಿಕ ಎದುರುದಾರ ನಂ.1 ರವರು ತಾಂತ್ರಿಕ ಅಭಿಪ್ರಾಯವನ್ನು ಕೋರಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕರಿಗೆ ದಿನಾಂಕ:14/09/2020ರ ಪತ್ರ ಬರೆದಿರುವುದು ಕಂಡು ಬಂದಿದೆ. ಸದರಿ ಒಂದು ವರ್ಷ ಏಳು ತಿಂಗಳು 22 ದಿನಗಳ ವಿಳಂಬಕ್ಕೆ ಎದುರುದಾರ ನಂ.1 ರವರು ನೀಡಿರುವ ಕಾರಣ ಏನೆಂದರೆ, ಚುನಾವಣಾ ಕಾರ್ಯ, ಕೋವಿಡ್-19 ಮತ್ತು ಕೆಲಸದೊತ್ತಡವೆಂದು ಇದೆ. ಅಭಿಪ್ರಾಯ ಕೋರಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕರಿಗೆ ಪತ್ರ ಬರೆಯಲು ಆಗಿರುವ ಸದರಿ ವಿಳಂಬವು ಅಸಾಮಾನ್ಯ ವಿಳಂಬವಾಗಿದ್ದು, ಎದುರುದಾರ ನಂ.1 ರವರು ಸದರಿ ವಿಳಂಬಕ್ಕೆ ನೀಡಿರುವ ಕಾರಣವು ನಂಬಲರ್ಹವಲ್ಲ. ಆದ್ದರಿಂದ, ಎದುರುದಾರ ನಂ.1 ರವರು ಭೂ ಮಾಫಿಯಾದವರ ಪ್ರಭಾವಕ್ಕೊಳಗಾಗಿ

ಫಿರ್ಯಾದಿದಾರರ ಅರ್ಜಿಯ ಮೇಲೆ ಉದ್ದೇಶಪೂರ್ವಕವಾಗಿ ಕ್ರಮ ಕೈಗೊಳ್ಳಲು ವಿಳಂಬ ಮಾಡುತ್ತಿದ್ದರೆಂಬ ಆಪಾದನೆಯು ಮೇಲ್ನೋಟಕ್ಕೆ ರುಜುವಾತಾಗಿದೆ;

2) ಭೂ ಪರಿವರ್ತನೆಗಾಗಿ ಎನ್.ಓ.ಸಿ ಕೋರಿ ಬರುವ ಅರ್ಜಿಗಳ ಸಂಬಂಧ ಸ್ಥಳ ಪರಿಶೀಲಿಸಿ ವರದಿಯೊಂದಿಗೆ ಮಂಡಿಸುವ ಕರ್ತವ್ಯವು ಎದುರುದಾರ ನಂ.1 ರವರದ್ದಾಗಿರುವುದರಿಂದ ಮತ್ತು ಫಿರ್ಯಾದಿದಾರರ ದಿನಾಂಕ:23/01/2019ರ ಅರ್ಜಿಯು ಎದುರುದಾರ ನಂ.2 ರವರ ಗಮನಕ್ಕೆ ಬರದೇ ಇರುವುದರಿಂದ, ಸದರಿ ಎದುರುದಾರ ನಂ.2 ರವರ ಯಾವುದೇ ಕರ್ತವ್ಯ ಲೋಪವು ಕಂಡು ಬರುವುದಿಲ್ಲ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರ ನಂ.1 ರವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಎದುರುದಾರ ನಂ.2 ರವರಾದ ಶ್ರೀ.ರಾಜಪ್ಪ ಇವರ ಯಾವುದೇ ಕರ್ತವ್ಯ ಲೋಪವು ಕಂಡು ಬರುವುದಿಲ್ಲವಾದ್ದರಿಂದ, ಅವರ ವಿರುದ್ಧದ ನಡವಳಿಯನ್ನು ಕೈಬಿಡಲಾಗಿದೆ.

10. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರ ನಂ.1 ರವರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

11. ಎದುರುದಾರ ನಂ.1 ರವರಾದ ಶ್ರೀ.ಹೆಚ್.ಕೆ.ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ, ಸಾಗರ ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ,

ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಉಪಲೋಕಾಯುಕ್ತರಿಗೆ ವಹಿಸ ಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಕೋರಿದೆ.

7/4/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.